




# ಗಣರಾಜ್ಯೋತ್ಸವ ಸ್ತಬ್ಧಚಿತ್ರ

# ಕರ್ನಾಟಕವೇ ನಕ್ಷತ್ರ!




ಇಡೀ ವಿಶ್ವದಲ್ಲಿ ಭಾರತದ 'ಗಣರಾಜ್ಯೋತ್ಸವ ಪರೇಡ್'ಗೆ ವಿಶೇಷ ಸ್ಥಾನಮಾನವಿದೆ. ವಿವಿಧ ಪರಿಕಲ್ಪನೆಯ ಸ್ತಬ್ಧಚಿತ್ರಗಳ ಪ್ರದರ್ಶನ, ಸೇನಾಪಡೆಗಳ ಪಥಸಂಚಲನ, ವೈವಿಧ್ಯಮಯ ಕಲೆ–ಸಂಸ್ಕೃತಿಯ ಅನಾವರಣ ಇಲ್ಲಿನ ಪ್ರಮುಖ ಆಕರ್ಷಣೆ. ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸುವ ಸ್ತಬ್ಧಚಿತ್ರಗಳಿಗಂತೂ ಇಲ್ಲಿ ವಿಶೇಷ ಪ್ರಾತಿನಿಧ್ಯವಿದೆ.



■ ಜಗನ್ನಾಥ ಪ್ರಕಾಶ್ ಎನ್.

ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವೆಂಬ ಹೆಗ್ಗಳಿಕೆ ನಮ್ಮ ದೇಶಕ್ಕಿದೆ. ಸ್ವಾತಂತ್ರ್ಯದ ನಂತರ ನಾವು ಗಣತಂತ್ರ ವ್ಯವಸ್ಥೆ ರೂಪಿಸಿಕೊಂಡಿದ್ದು 1950ರ ಜನವರಿ 26ರಂದು. ಭಾರತ ಸರ್ವತಂತ್ರ ಸ್ವತಂತ್ರ ರಾಷ್ಟ್ರವಾಗಿ ಹೊರ ಹೊಮ್ಮಿದ ದಿನದ ನೆನಪಿನಲ್ಲಿ ಪ್ರತಿ ವರ್ಷವೂ ಗಣರಾಜ್ಯೋತ್ಸವವನ್ನು ಆಚರಿಸಲಾಗುತ್ತಿದೆ.

ವಿಶ್ವದ ಪುರಾತನ ದೇಶಗಳಲ್ಲಿ ಒಂದೆನಿಸಿಕೊಂಡಿರುವ ಭಾರತದ ಈಗಿನ ರಾಜಧಾನಿ ನವದೆಹಲಿಯ ಕೆಂಪುಕೋಟೆ ಅಂಗಳದಲ್ಲಿ ನಡೆಯಲಿರುವ 'ಗಣರಾಜ್ಯೋತ್ಸವ ಪರೇಡ್'ಗೆ ವಿಶೇಷ ಆದ್ಯತೆ ನೀಡಲಾಗುತ್ತದೆ. ಪರೇಡ್ ನಡೆಯುತ್ತಿದ್ದ ನವದೆಹಲಿಯ ರಾಜ್‌ಪಥವು ಈಗ 'ಕರ್ತವ್ಯ ಪಥ'ವೆಂದು ಬದಲಾಗಿದೆ.

ಗಣತಂತ್ರ ವ್ಯವಸ್ಥೆ ಅಸ್ತಿತ್ವಕ್ಕೆ ಬಂದ ಬಳಿಕ ದೇಶ ವಿದೇಶಗಳಲ್ಲಿ ಗಣರಾಜ್ಯೋತ್ಸವ ನಡೆಯುತ್ತಿವೆ. ಆದರೆ, ನವದೆಹಲಿಯಲ್ಲಿ ನಡೆಯುವ ಗಣರಾಜ್ಯೋತ್ಸವಕ್ಕೆ ಸಿಗುವ ಜನಮನ್ನಣೆ ಬೇರೆ ಯಾವ ದೇಶಗಳ ಗಣರಾಜ್ಯೋತ್ಸವಕ್ಕೂ ಸಿಗುವುದಿಲ್ಲ. ಜಗತ್ತಿನ ಎದುರು ತಮ್ಮ ಶಕ್ತಿ ಪ್ರದರ್ಶನ ತೆರೆದಿಡಲು ರಕ್ಷಣಾ ಪಡೆಗಳ ಪ್ರತಿಯೊಂದು ವಿಭಾಗಗಳಿಗೂ ಇದೊಂದು ಸದವಕಾಶ. ಭಾರತ ವಿಭಿನ್ನ ಸಂಸ್ಕೃತಿಗಳ ತವರು. ಇಲ್ಲಿನ ವೈವಿಧ್ಯಮಯ ಕಲೆ, ಸಂಸ್ಕೃತಿಯ ಪ್ರದರ್ಶನಕ್ಕೂ ಗಣರಾಜ್ಯೋತ್ಸವ ಪರೇಡ್ ವೇದಿಕೆಯಾಗಲಿದೆ. ಇಲ್ಲಿ ಪ್ರದರ್ಶನಗೊಳ್ಳುವ ಸ್ತಬ್ಧಚಿತ್ರಗಳು ಎಲ್ಲರ ಕೇಂದ್ರ ಬಿಂದು.